<table>
<tr><td colspan="4">ಕರ್ನಾಟಕ ಸರ್ಕಾರ<br>(ಸಿ.ಆರ್.ಪಿ-67)</td></tr>
<tr><td rowspan="4">ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4</td><td colspan="3">ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ</td></tr>
<tr><td colspan="3">ಸಿ.ಸಿ ನಂ. 834/2014</td></tr>
<tr><td></td><td>ಸಿ.ಡಬ್ಲೂ</td><td>10</td></tr>
<tr><td></td><td>ಪಿ.ಡಬ್ಲೂ</td><td>6</td></tr>
<tr><td>ಸಾಕ್ಷಿದಾರರ ಹೆಸರು</td><td colspan="3">ಮೋಹನ್ ಹೆಚ್.ಎಸ್. ಬಿನ್ ಸಂಪಂಗಿರಾಮಯ್ಯ</td></tr>
<tr><td>ವಯಸ್ಸು</td><td colspan="3">44 ವರ್ಷ</td></tr>
<tr><td>ಉದ್ಯೋಗ</td><td colspan="3">ಹೆಚ್.ಸಿ, ಕನಕಪುರ ಸಿ.ಪಿ.ಐ ಕಚೇರಿ, ಕನಕಪುರ</td></tr>
<tr><td>ವಾಸಸ್ಥಳ</td><td colspan="3">ಕನಕಪುರ</td></tr>
</table>

ದಿನಾಂಕಃ **09.07.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

**1)** **2009** ರಿಂದ ಆಗಸ್ಟ **2014** ರವರೆಗೆ ನಾನು ಚನ್ನಪಟ್ಟಣದ ಗ್ರಾಮಾಂತರ ವೃತ್ತ ನಿರೀಕ್ಷಕರ ಕಛೇರಿಯಲ್ಲಿ ತನಿಖಾ ಸಹಾಯಕನಾಗಿ ಕರ್ತವ್ಯ ಮಾಡಿರುತ್ತೇನೆ.

**2)** ಈ ಪ್ರಕರಣದಲ್ಲಿ ತನಿಖಾಧಿಕಾರಿಯಾದ ಚಾಸಾ-**12** ರವರು ಹೇಳಿದ ರೀತಿ ನಾನು ತನಿಖಾ ಸಮಯದಲ್ಲಿ ಸ್ದಳ ಪಂಚನಾಮೆ, ಜಪ್ತು ಪಂಚನಾಮೆಗಳನ್ನು ತಯಾರಿಸಿ ಹಾಗೂ ಅವರು ಹೇಳಿದಂತೆ ಸಾಕ್ಷಿದಾರರ ಹೇಳಿಕೆಗಳನ್ನೂ ಸಹ ತಯಾರು ಮಾಡಿರುತ್ತೇನೆ. ನಿಪಿ.**5** ರ ಸ್ಥಳ ಪಂಚನಾಮೆ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.**5** ಸಿ ಎಂದು ಗುರುತಿಸಲಾಯಿತು. ನಿಪಿ.**6** ರಿಂದ **11** ರ ಅಮಾನತ್ತು ಪಂಚನಾಮೆಗಳ ಮೇಲೆ ಇರುವ ತನ್ನ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.**6** ಬಿ, **7** ಬಿ, **8** ಬಿ, **9** ಬಿ, **10** ಬಿ, **11** ಬಿ ಎಂದು ಗುರುತಿಸಲಾಯಿತು.

**ಮರುವಿಚಾರಣೆ ಇಲ್ಲ.**

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ.ಹೆಚ್.ಎಸ್.ಹೆಚ್.. ವಕೀಲರಿಂದಃ

**1)** ನಾನು ತನಿಖಾಧಿಕಾರಿಗಳಿಗೆ ಸಹಾಯಕನಾಗಿ ಕರ್ತವ್ಯ ಮಾಡುತ್ತಿದ್ದೆನು ಎಂಬ ವಿಚಾರದ ಕುರಿತು ಹೇಳಿಕೆಯನ್ನು ನೀಡಿರುವುದಿಲ್ಲ. ನಿಪಿ.**5** ರಿಂದ **11** ರವರೆಗಿನ ದಾಖಲೆಗಳಲ್ಲಿ ತನಿಖಾಧಿಕಾರಿಗಳ ಆದೇಶದ ಮೇರೆಗೆ ನಾನು ಬರವಣಿಗೆ ಮಾಡಿರುವುದಾಗಿ ಉಲ್ಲೇಖ ಮಾಡಿಲ್ಲ ಆದರೆ ನನ್ನ ಕೈಬರಹ ಇರುವುದಾಗಿ ನಮೂದು ಮಾಡಿರುತ್ತೇನೆ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)**

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ.